ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ 43 ಡಿವಿಪಿ (1) 2018.

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು 560 001.
ದಿನಾಂಕ: 06-12-2018.

**: ಸುತ್ತೋಲೆ :**

**ವಿಷಯ:** ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ 2005 ರ ನಂತರ ಅನುಮೋದನೆಗೊಂಡ ಸಿಬ್ಬಂದಿಗಳಿಗೆ ಸಂಸ್ಥೆ ವೇತನಾನುದಾನಕ್ಕೆ ಒಳಪಟ್ಟ ದಿನಾಂಕದಿಂದ ಸಿಬ್ಬಂದಿ ಅನುಮೋದನೆಗೊಂಡ ದಿನಾಂಕದವರೆಗೆ ಬಾಕಿ ವೇತನ ಮಂಜೂರು ಮಾಡಲು ಪರಿಗಣಿಸುವ ಬಗ್ಗೆ

**ಉಲ್ಲೇಖ:** 1) ಉನ್ನತ ಶಿಕ್ಷಣ ಸಚಿವರ ಟಿಪ್ಪಣಿ ಸಂಖ್ಯೆ: ಉಶಿಸಕಾ/ಆಕಾ/434/2018, ದಿನಾಂಕ 16-08-2018

2) ಸರ್ಕಾರದ ಪತ್ರ ಸಂಖ್ಯೆ: ಇಡಿ 01 ಟಿಪಿಇ 2018(ಭಾ), ದಿನಾಂಕ 27-09-2018

ಮೇಲೆ ನಮೂದಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ(1) ಮತ್ತು (2) ರ ಪತ್ರದಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನದಲ್ಲಿರುವ ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ 2005 ರ ಪೂರ್ವದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸಿಬ್ಬಂದಿಗಳಿಗೆ ಸಂಸ್ಥೆ ವೇತನಾನುದಾನಕ್ಕೆ ಒಳಪಟ್ಟ ದಿನಾಂಕದಿಂದ ವೇತನಕ್ಕೆ ಪರಿಗಣಿಸುವ ರೀತಿಯಲ್ಲಿಯೇ 2005 ರ ನಂತರ ಅನುಮೋದನೆಗೊಂಡು ಸಂಸ್ಥೆಯ ವೇತನಾನುದಾನಕ್ಕೆ ಒಳಪಟ್ಟ ಪೂರ್ವದಲ್ಲಿಯೂ ಕಾರ್ಯನಿರ್ವಹಿಸುತ್ತಿದ್ದ ಸಿಬ್ಬಂದಿಗಳೂ ಸಹ ಸಂಸ್ಥೆ ವೇತನಾನುದಾನಕ್ಕೆ ಒಳಪಟ್ಟ ದಿನಾಂಕದಿಂದ ವೇತನ ಪರಿಗಣಿಸಲು ಕೋರಿ ಸಲ್ಲಿಸಿರುವ ಮನವಿಯನ್ನು ನಿಯಮಾನುಸಾರ ಪರಿಶೀಲಿಸಿ ಅಗತ್ಯ ಕ್ರಮಕೈಗೊಳ್ಳಲು ತಿಳಿಸಲಾಗಿದೆ.

ಈ ದಿಸೆಯಲ್ಲಿ ವೇತನಾನುದಾನಕ್ಕೆ ಒಳಪಟ್ಟ ಅನುದಾನಿತ ಪಾಲಿಟೆಕ್ನಿಕ್‌ಗಳ ಇಂತಹ ಪ್ರಸಂಗಗಳಿದ್ದಲ್ಲಿ ಅಂತಹ ಸಿಬ್ಬಂದಿಗಳ ವಿವರವನ್ನು ಈ ಪತ್ರದೊಂದಿಗೆ ಲಗತ್ತಿಸಿದ ನಮೂನೆಯಲ್ಲಿ ಮಾಹಿತಿಯನ್ನು ಭರ್ತಿ ಮಾಡಿ ಕೂಡಲೇ ನಿರ್ದೇಶನಾಲಯಕ್ಕೆ ನೀಡಲು ಈ ಮೂಲಕ ಕೋರಲಾಗಿದೆ.

**ಜಂಟಿ ನಿರ್ದೇಶಕರು (ಎಟಿಎಸ್).**

ಇವರಿಗೆ,

1) ಎಲ್ಲಾ ಅನುದಾನಿತ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರುಗಳಿಗೆ

ಪ್ರತಿ,

1) ಸಂಯೋಜಕರು, ಇ-ಆಡಳಿತ ವಿಭಾಗ- ಸುತ್ತೋಲೆಯನ್ನು ಡಿಟಿಇ ವೆಬ್‌ಸೈಟ್‌ನಲ್ಲಿ ಪ್ರಚರ ಪಡಿಸಲು

2005 ರ ನಂತದಲ್ಲಿ ವೇತನಾನುದಾನಕ್ಕೆ ಒಳಪಟ್ಟ ಅನುದಾನಿತ ಪಾಲಿಟೆಕ್ನಿಕ್ ಸಿಬ್ಬಂದಿಗಳಿಗೆ ಸಂಸ್ಥೆ ವೇತನಾನುದಾನಕ್ಕೆ ಒಳಪಟ್ಟ ಸಮಯದಿಂದ ವೇತನ ಬಿಡುಗಡೆಗೆ ಪರಿಗಣಿಸು ಬಗ್ಗೆ

| ಕ್ರ. ಸಂ. | ಸಂಸ್ಥೆಯ ಹೆಸರು | ನೌಕರರ ಹೆಸರು | ಪ್ರಸುತ ಪದನಾಮ | ಸೇವೆಗೆ ಸೇರಿದ ದಿನಾಂಕ/ ಮುಂಬಡ್ತಿ | ಅನುಮೋದನೆಗೊಂಡ ಸಿಬ್ಬಂದಿಗಳ ಸರ್ಕಾರಿ ಆದೇಶ ಸಂಖ್ಯೆ & ದಿನಾಂಕ | 2005 ರ ನಂತದಲ್ಲಿ ಅನುಮೋದನೆಗೊಂಡ ಸಿಬ್ಬಂದಿಗಳಿಗೆ ವೇತನಾನುದಾನ ಪರಿಗಣಿಸ ಬೇಕಾದ ಅವಧಿ | | [7] ಮತ್ತು [8] ಅವಧಿಯ ವೇತನದ ವಿವರ | | ಸಿಬ್ಬಂದಿ ರೋಸ್ಟರ್ ಎದುರಾಗಿ ಅನುಮೋದನೆ ಗೊಂಡಿದ್ದಲ್ಲಿ ವಿವರ |
|---|---|---|---|---|---|---|---|---|---|---|
| | | | | | | ಸಂಸ್ಥೆ ವೇತನಾನುದಾನಕ್ಕೆ ಒಳಪಟ್ಟ ದಿನಾಂಕ | ವೇತನಾನುದಾನಕ್ಕೆ ಸಿಬ್ಬಂದಿ ಅನುಮೋದನೆಗೊಂಡ ದಿನಾಂಕ | 100% ವೇತನ | 85% ವೇತನ | |
| [1] | [2] | [3] | [4] | [5] | [6] | [7] | [8] | [9] | [10] | [11] |
| | | | | | | | | | | |
| | | | | | | | | | | |
| | | | | | | | | | | |
| | | | | | | | | | | |